ವಿಫಲರಾಗಿದ್ದಾರೆ ಮತ್ತು ಮಾನ್ಯ ಸರ್ಕಾರದ ಗಮನಕ್ಕೆ ಬಂದಿದೆ ಎಂದು ತಿಳಿದುಕೊಂಡಿದ್ದೇನೆ. ಆದರೂ ಕೂಡ ಮಂತ್ರಿಗಳ ಗಮನಕ್ಕೆ ಪತ್ರವನ್ನು ಬರೆದಿದ್ದಾರೆ ಮಂತ್ರಿಗಳೂ ಕೂಡ ನಮಗೆ ಪತ್ರ ಸಿಕ್ಕಿದೆ ಎಂದು ಹೇಳಿದ್ದಾರೆ ತಕ್ಷಣ ಅದಕ್ಕೆ ಗಮನಹರಿಸಿದ್ದರೆ ಹಾಗೂ ಇನ್ನು [illegible] ಮುಂದುವರಿದರೆ ತುಂಬಾ ತೊಂದರೆಯಾಗುತ್ತದೆ ಎಂದು ಹೇಳಬಯಸುತ್ತೇನೆ.

SRI NARAYANARAO GOVIND THARALE : Last year, one of the body-builders, Sunil Aplekar, participated in China. He was afflicted with AIDS. He is not getting anything from the Government kindly look into the matter.

ಶ್ರೀ ಅಶೋಕ್ ಕಾಟ್ಟೆ : ಹುಬ್ಬಳ್ಳಿ ಮಹಾನಗರ, ಜಂಗಳೂರನ್ನು ಬಿಟ್ಟರೆ ರಾಜ್ಯದ ಎರಡನೇ ಮಹಾ ದೊಡ್ಡನಗರ, ಅಲ್ಲಿರುವಂಥದ್ದು ಸದರಿ ಕ್ರೀಡಾಂಗಣ ಒಂದೆ. ಆ ಸದರಿ ಕ್ರೀಡಾಂಗಣ ಹೊನ್ನೆ...

ಅಧ್ಯಕ್ಷರು : ತಾವು ಹುಬ್ಬಳ್ಳಿಯವರನ್ನು ಕೇಳಿದರೆ ಅವರು ಮಾಹಿತಿಯನ್ನು ಎಲ್ಲೆ ಇಟ್ಟುಕೊಂಡಿರುತ್ತಾರೆ. ಇಲ್ಲಿ ಪ್ರಸ್ತಾಪವಾಗುತ್ತಿರುವಂಥದ್ದು ಮಂಗಳೂರಿನದು. ಅದರ ಬಗ್ಗೆ ಮಾಹಿತಿ ಇರುವುದಿಲ್ಲ.

ಶ್ರೀ ಬಿ. ಚಂದ್ರಣ್ಣ : ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವಂಥದ್ದು ಬಹಳ ಸರಿಯಾಗಿದೆ, ರಾಜ್ಯಕ್ಕೆ ಬೇಕಾಗಿರತಕ್ಕಂಥದ್ದು. ಆ ಉಪಪ್ರಶ್ನೆಯನ್ನು ನಾನು ಅನುಮೋದಿಸುತ್ತೇನೆ. ಏಕೆಂದರೆ ನಮ್ಮ ರಾಜ್ಯದಲ್ಲಿ ಅಂತಹ ಘಟನೆಗಳು ಬಹಳಷ್ಟು ಆಗಿವೆ...

ಅಧ್ಯಕ್ಷರು : ಅಶೋಕ್ ಕಾಟ್ಟೆಯವರೆ ನೀವು ಸಪರೇಟಾಗಿ ಪ್ರಶ್ನೆಯನ್ನು ಕೇಳಿ ಅದನ್ನು ತರಿಸಿಕೊಳ್ಳುತ್ತೇನೆ. ಏಕೆಂದರೆ ವಿಷಯ ಅವರಲ್ಲಿ ಇರುವುದಿಲ್ಲ.

ಸೋಮವಾರಪೇಟೆ ತಾಲ್ಲೂಕಿನ ಆಲೂರು ಸಿದ್ದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರ.

156 - ಶ್ರೀ ಎಂ.ಸಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರ ಪೇಟೆ ತಾಲ್ಲೂಕಿನ ಆಲೂರು-ಸಿದ್ದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಂಜೂರಾಗಿರುವ ಸಿಬ್ಬಂದಿಯ ಸಂಖ್ಯೆ ಎಷ್ಟು?

ಆ) ಇಲ್ಲಿರುವ ವೈದ್ಯಾಧಿಕಾರಿ ಹುದ್ದೆಯು ಎಷ್ಟು ದಿವಸಗಳಿಂದ ಖಾಲಿ ಇದೆ? ಗುತ್ತಿಗೆ ಆಧಾರದ ಮೇಲೆ ಅಥವಾ ಯಾವ ರೀತಿಗೆ ವೈದ್ಯರನ್ನು ನೇಮಕ ಮಾಡದೇಯಿರಲು ಕಾರಣವೇನು?

ಇ) ಈ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವಿಶ್ವಬ್ಯಾಂಕ್ ನೆರವಿನಿಂದ ಕಟ್ಟುವ ಕಟ್ಟಡದ ಯೋಜನೆ [illegible] ಇರಬಹುದೇ?

ಡಾ: ಹೆಚ್. ಪಿ. ಮಹದೇವಪ್ಪ (ಆರೋಗ್ಯ ಕುಟುಂಬ ಕಲ್ಯಾಣ ಸಚಿವರ ಪರವಾಗಿ) : ಎಂ. ಪಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) 6.

ಆ) ಬಾಯಂ ವೈದ್ಯರನ್ನು ನೇಮಕ ಮಾಡಲಾಗಿದೆ.

ಇ) ಹೌದು.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಆಲೂರು-ಸಿದ್ದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮುಂಜೂರಾದ ಸಿಬ್ಬಂದಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೇನೆ. ಅದಕ್ಕೆ ಉತ್ತರವಾಗಿ 6 ಎಂದು ಕೊಟ್ಟಿದ್ದಾರೆ. ಅದರ ಜೊತೆಗೆ ಅಲ್ಲಿಗೆ ವೈದ್ಯರನ್ನು ಖಾಯಂ ಆಗಿ ಆಗಲೀ ಅಥವಾ ಗುತ್ತಿಗೆ ಆಧಾರದ ಮೇಲಾದರೂ ಆಗಲಿ ನೇಮಕ ಮಾಡಿದ್ದೀರಾ ಎಂದು ಕೇಳಿದ್ದೇನೆ ಅದಕ್ಕೆ ಖಾಯಂ ವೈದ್ಯರನ್ನು ನೇಮಕ ಮಾಡಲಾಗಿದೆ ಎಂದು ಕೊಟ್ಟಿದ್ದಾರೆ. ಆದರೆ ಇದು ಸತ್ಯಕ್ಕೆ ದೂರವಾದ ಮಾಹಿತಿ ಏಂಬುದಾಗಿ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಒಂದುವೇಳೆ ಆ ರೀತಿ ಖಾಯಂ ಪ್ರಶ್ನೆಗೆ ಉತ್ತರವಾಗಿ ಈ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ವಿಶ್ವಬ್ಯಾಂಕ್ ನರವಿನಿಂದ ಕಟ್ಟಡವನ್ನು ಕಟ್ಟಲಾಗುವುದು ಎಂದು ಕೊಟ್ಟಿದ್ದಾರೆ. ಈಗ ಅದಕ್ಕಾಗಿ ಎಷ್ಟು ಹಣ ಬಿಡುಗಡೆಯಾಗಿದೆ? ಆ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಮತ್ತು ಸರ್ಕಾರ ಇದಕ್ಕಾಗಿ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆಯೆ?

ಶ್ರೀ ಎಂ. ಪಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಓದಿಗಿಸಿ ಖಾಯಂ ಆಗಿ ವೈದ್ಯಾಧಿಕಾರಿಗಳು ಕೆಲಸ ಮಾಡುತ್ತಾರೆ ಎಂದು ಹೇಳಿದ್ದೇವೆ. ಅದಕ್ಕೆ ಮಾನ್ಯ ಮಿತ್ರರಾಗಿರತಕ್ಕಂಥ ರಂಜನರವರು ಇದು ಸತ್ಯಕ್ಕೆ ದೂರ ಎಂದು ಹೇಳಿ ಆ ವೈದ್ಯರ ಹೆಸರನ್ನು ಕೂಡ ಹೇಳಬೇಕೆಂದು ಹೇಳಿದ್ದಾರೆ. ಅಲ್ಲಿ ಕೆಲಸ ಮಾಡುತ್ತಾ ಇರತಕ್ಕಂಥ ವೈದ್ಯರ ಹೆಸರು ಡಾ: ಹೆಗಡೆ ಪಿ.ಎಚ್. ಅವರು ಅಲ್ಲಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಅಲ್ಲಿ ಗುತ್ತಿಗೆ ಆಧಾರದಮೇಲೆ ವೈದ್ಯರನ್ನು ನೇಮಕಾತಿ ಮಾಡಿದ್ದರು. ಅವರು 3-4 ದಿವಸ ಕೆಲಸಮಾಡಿ ಹೋಗಿದ್ದಾರೆ, ಈಗ ಅಲ್ಲಿ ವೈದ್ಯರೇ ಇಲ್ಲ.

ಶ್ರೀ ಎಂ. ಪಿ. ನಾಣಯ್ಯ : ಆ ಮಾಹಿತಿ ನನ್ನ ಹತ್ತಿರ ಇಲ್ಲ. ಈಗ ನಾವು ವೈದ್ಯಾಧಿಕಾರಿಯನ್ನು ನೇಮಕ ಮಾಡಿದ್ದೇವೆ. ಅಲ್ಲಿ ಪಿ.ಎಚ್. ಹೆಗಡೆ ಎಂಬುವವರು ಕೆಲಸ ಮಾಡುತ್ತಿದ್ದಾರೆ. ತಮ್ಮ ಈ ಪ್ರಶ್ನೆ ಯಾವುದು ಇದ ಅದಕ್ಕೆ ಮಾಹಿತಿಯನ್ನು ಇಲಾಖೆಯಿಂದ ತರಿಸಿ ಅವರೇನಾದರೂ ರಜೆಯಮೇಲೆ ಹೋಗಿದ್ದಾರೋ, ಅಥವಾ ಎಲ್ಲಾದರೂ ಸಾಂದರ್ಭಿಕ ರಜೆಯನ್ನು ಪಾಕೆ ಹೋಗಿಬಿಟ್ಟಿದ್ದಾರೆಯ ಎಂಬುವನ್ನು ತಿಳಿಸುತ್ತೇನೆ. ಆದರೆ ನಮ್ಮ ಪಟ್ಟಿಯಲ್ಲಿ ಪಿ.ಎಚ್. ಹೆಗಡೆ ಎಂಬುವವರು ಕೆಲಸ ಮಾಡುತ್ತಿದ್ದಾರೆ. ಇನ್ನು ಒಂದು. ಎರಡನೆಯ ಪ್ರಶ್ನೆ, ತಮಗೆ ಗೊತ್ತಿದೆ, ಇಂದಿಯನ್ ಪಾಪುಲೇಷನ್ ಪ್ರಾಜೆಕ್ಟಿನ ಅಡಿಯಲ್ಲಿ ಆಲೂರು-ಸಿದ್ದಾಪುರಕ್ಕೆ ಒಂದು ಆಸ್ಪತ್ರೆ ಕಟ್ಟಡವನ್ನು ಕಟ್ಟುವುದಕ್ಕಾಗಿ 15½ ಲಕ್ಷ ರೂಪಾಯಿಗಳ ಕಾಮಗಾರಿ ಕೆಲಸ ಪ್ರಾರಂಭವಾಗಬೇಕಾಗಿದೆ. ಆ ಕೆಲಸಕ್ಕೆ ತಾಂತ್ರಿಕ

ಮಂಜೂರಾತಿಯನ್ನು ಕೂಡಲೆಕ್ಕಾಗಿ ಈದು ಸರ್ಕಾರದ ಮಟ್ಟದಲ್ಲಿದೆ. ಆಡಳಿತಾತ್ಮಕ ಮಂಜೂರಾತಿಯಾದ ಮೇಲೆ ಕಟ್ಟಡದ ಕೆಲಸವನ್ನು ಮಾಡುತ್ತೇವೆ. ನನಗೂ ಸ್ವಲ್ಪಮಟ್ಟಿಗೆ ಆದರಲ್ಲಿ ಆಸಕ್ತಿ ಇದೆ.

ಶ್ರೀ ಎಂ. ಪಿ. ಅಪ್ಪಯ್ಯ ರಂಜನ್ : ಮಾನ್ಯ ಅಧ್ಯಕ್ಷರೆ, ನನ್ನ ಇನ್ನೊಂದು ಪ್ರಶ್ನೆಗೆ ಉತ್ತರ ಬರಲಿಲ್ಲ, ಸರ್ಕಾರ ಆಸ್ಪತ್ರೆಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆಯೆ ಎಂದು ಕೇಳಿದ್ದೇನೆ. ಜಮೀನನ್ನು ವಶಪಡಿಸಿಕೊಂಡಿದೆಯೆ? ಆಥವಾ ಇಲ್ಲವೆ?

ಶ್ರೀ ಎಂ. ಸಿ. ನಾಣಯ್ಯ : ನಾವು ಆಡಳಿತಾತ್ಮಕ ಮಂಜೂರಾತಿಯನ್ನು ಕೊಡತಕ್ಕಂಥ ಸಂದರ್ಭದಲ್ಲಿ ಅಲ್ಲಿ ಸರ್ಕಾರಿ ಜಮೀನು ಇದೆ, ಆ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಎಂ. ಪಿ. ಅಪ್ಪಯ್ಯ ರಂಜನ್ : ಸರ್ಕಾರದ ಜಮೀನು ಇದ್ದು, 1½ ಎಕರೆ ಜಮೀನಿನ ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ ಅದನ್ನು ಆದಷ್ಟು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಅಧ್ಯಕ್ಷರೆ, ಅದನ್ನು ಮಾಡುತ್ತೇವೆ.

ಉಡುಪಿ ಸಾರ್ವಜನಿಕ ಆಸ್ಪತ್ರೆ ಕುರಿತು

157 - ಶ್ರೀ ಯು.ಆರ್. ಸಭಾಪತಿ (ಉಡುಪಿ ಕ್ಷೇತ್ರ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಸಾರ್ವಜನಿಕ ಮತ್ತು ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ, ಇಲ್ಲಿ, ಮಂಜೂರಾದ ವೈದ್ಯರುಗಳ ಮತ್ತು ವೈದ್ಯಕೇತರುಗಳ ಹುದ್ದೆ ಎಷ್ಟು? ಖಾಲಿ ಇರುವ ಹುದ್ದೆಗಳೆಷ್ಟು?

ಆ) ಇಷ್ಟು ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಬಂದಿದ್ದರೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಡಾ:: ಹೆಚ್.ಸಿ. ಮಹದೇವಪ್ಪ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಈ ಆಸ್ಪತ್ರೆಗೆ ಮಂಜೂರಾದ ಹುದ್ದೆ ಹಾಗೂ ಖಾಲಿ ಇರುವ ಹುದ್ದೆಗಳ ಮಾಹಿತಿ ಈ ಕೆಳಕಂಡಂತಿವೆ.

		ಮಂಜೂರು	ಕಾರ್ಯನಿರ್ವಹಣೆ	ಹುದ್ದೆ - ಖಾಲಿ
1.	ವೈದರು	18	9	9
2.	ವೈದ್ಯರೇತರ ಹುದ್ದೆಗಳು	144	118	26
	ಒಟ್ಟು	**162**	**127**	**35**